**ಸಾಕ್ಷಿಯನ್ನು ದಿಃ06.02.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ದಾವಾ ಸ್ವತ್ತು ರುಕ್ಮಣಮ್ಮನವರಿಗೆ ಹೆಸರಿಗೆ ಬರುವ ಮುಂಚೆ ಅವರ ಪತಿ ಮೊಗಣ್ಣೇಗೌಡರ ಹೆಸರಿನಲ್ಲಿತ್ತು. ಮೊಗಣ್ಣೇಗೌಡರ ಹೆಸರಿನಲ್ಲಿ 2 ಎಕರೆ ಇತ್ತು. ಮೊಗಣ್ಣೇಗೌಡರಿಗೆ ಈಗ ಲಕ್ವಾ ಹೊಡೆದಿದೆ ಎಂದರೆ ಸರಿ. ಅದಕ್ಕಿಂತ ಮುಂಚೆ ಸದರಿ ಸ್ವತ್ತನ್ನು ಮೊಗಣ್ಣೇಗೌಡರು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಸದರಿ ಜಮೀನನ್ನು ಈಗ ರುಕ್ಮಣಮ್ಮನವರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ.

2. ರುಕ್ಮಣಮ್ಮ ವ್ಯವಸಾಯ ಮಾಡುವ ಜಮೀನಿನ ಮೇಲೆ ಬೋರೇಗೌಡ, ಶಿವೇಗೌಡ ಹಾಗೂ ಸಣ್ಣತಾಯಮ್ಮನವರಿಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿ.

3. ದಿಃ 26.07.2020 ರಂದು ದಾವಾ ಸ್ವತ್ತಿನಲ್ಲಿ ತಂಬಾಕು ಬಿಡಿಸಲು ಬಂದಾಗ ನೀವು ಅವರ ಸ್ವಾಧೀನಕ್ಕೆ ತೊಂದರೆ ನೀಡಿದ್ದೀರಿ ಎಂದರೆ ಸರಿಯಲ್ಲ. ಆ ದಿನ ನೀವು ದಾವಾ ಸ್ವತ್ತಿಗೆ ಅಕ್ರಮ ಪ್ರವೇಶ ಮಾಡಿ ವಾದಿಗಳ ಸ್ವಾಧೀನಕ್ಕೆ ತೊಂದರೆ ನೀಡಿದ್ದೀರಾ ಎಂದರೆ ಸರಿಯಲ್ಲ.

4. ರುಕ್ಮಣಮ್ಮ ನವರು ಆ ಬಗ್ಗೆ ಗ್ರಾಮಸ್ಥರನ್ನು ಸೇರಿಸಿ ನ್ಯಾಯ ಪಂಚಾಯತಿ ಮಾಡಿದ್ದು, ಪಂಚಾಯತಿಯಲ್ಲಿ ಸಹ ನೀವು ತೊಂದರೆ ಕೊಡದಂತೆ ಹೇಳಿದ್ದರೂ ನೀವು ಮುಂದುವರಿಸಿದ್ದೀರಾ ಎಂದರೆ ಸರಿಯಲ್ಲ.

5. ದಿಃ27.07.2020 ರಂದು ವಾದಿಯು ಬೆಟ್ಟದಪುರ ಠಾಣೆಯಲ್ಲಿ ನೀವು ದಾವಾ ಸ್ವತ್ತಿಗೆ ತೊಂದರೆ ನೀಡುತ್ತಿದ್ದೀರಾ ಎಂದು ದೂರು ನೀಡಿದ್ದರು ಎಂದರೆ, 4 ಎಕರೆ ತಮಗೆ ಸೇರಬೇಕು ಎಂದು ದೂರು ನೀಡಿದ್ದರು ಎಂದು ನುಡಿಯುತ್ತಾರೆ. ವಾದಿ 2 ಎಕರೆ ಜಮೀನಿಗೆ ತೊಂದರೆ ಕೊಡುತ್ತಾರೆ ಎಂದು ದೂರು ನೀಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

6. ರುಕ್ಮಣಮ್ಮ ಅಥವಾ ಅವರ ಪತಿ ನಿಮಗೆ 4 ಎಕರೆ ಬಿಡುವಂತೆ ಯಾವತ್ತೂ ಹೇಳಿಲ್ಲ ಎಂದರೆ ಸರಿಯಲ್ಲ. ಅವರ ಹೆಸರಿಗೆ ಇರುವ 2 ಎಕರೆ ಜಮೀನಿನ ಸ್ವಾಧೀನಕ್ಕೆ ನೀವು ಅಡ್ಡಿವುಂಟು ಮಾಡದಂತೆ ದೂರು ನೀಡಿದ್ದರು ಎಂದರೆ ಸರಿಯಲ್ಲ.

7. ಪ್ರತಿವಾದಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಲಿಖಿತ ಹೇಳಿಕೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ